ಸದಾ ಇದನ್ನು ಕುಡಿಯುತ್ತಿದ್ದರಂತೆ. ಅದಕ್ಕೆ ಅಮೃತ ಎಂದು ಹೆಸರಿಟ್ಟಿದ್ದರಂತೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ. ಯಾವುದೇ ಆಗಲಿ ಕಂಟ್ರೋಲ್ ತಪ್ಪಿದರೆ ತಪ್ಪದೆ ಡೇಂಜರ್ ಜೋನ್‌ಗೆ ಬಿದ್ದುಬಿಡುತ್ತದೆ'. ಮಾಧವನ್ ಪಿಳ್ಳೈ ಹೇಳಿದಂತೆ ಈತನಲ್ಲಿ ಅಗಾಧವಾದ ಜನರಲ್ ನಾಲೆಡ್ಜ್ ತುಂಬಿಕೊಂಡಿದೆ ಅನ್ನಿಸಿತು .

'ನಿಮ್ಮ ಬಗ್ಗೆ ಮಾಧವನ್ ಪಿಳ್ಳೈಗೆ ಎಲ್ಲಿಲ್ಲದ ಅಭಿಮಾನ'. ಹೇಳಿದ್ದೆ ನಾನು.

'ಪಿಳ್ಳೈ ಚೆನ್ನಾಗಿ ಓದಿಕೊಂಡಿದ್ದಾನೆ. ನಾನು ಹದಿನೈದು ವರ್ಷ ವಯಸ್ಸಿಗೆ ಮುಂಬಯಿಗೆ ಓಡಿ ಹೋದವನು. ಅಲ್ಲಿಂದ ದಿಲ್ಲಿ , ಬನಾರಸ್ ಎಲ್ಲಾ ಓಡಾಡಿಕೊಂಡು ಬಂದು ಮತ್ತೆ ಮುಂಬಯಿಯಲ್ಲಿ ಮೂವತ್ತು ವರ್ಷ ಸಣ್ಣ ಹೋಟೆಲ್ ನಡೆಸಿದವನು. ನೀವು ಮುಂಬಯಿಯ ನಾಗ್ಪಾಡ್ ನೋಡಿದ್ದೀರಾ?' ಎಂದು ಕಾಲುಗಳ ಮಾಂಸಖಂಡಗಳನ್ನು ಹಿತವಾಗಿ ಒತ್ತುತ್ತಾ ಕೇಳಿದ್ದ. 'ಮುಂಬಯಿಗೆ ಐದಾರು ಸಾರಿ ಹೋಗಿದ್ದೀನಿ. ನಾಗ್ಪಾಡ್‌ಗೆ ಹೋಗಿಲ್ಲ. ನಾಗ್ಪಾಡ್ ಹೆಸರನ್ನೂ ಈಗಲೇ ಕೇಳ್ತಿರೋದು'. ನಿಜ ಹೇಳಿದ್ದೆ. 'ರೆಡ್ ಲೈಟ್ ಏರಿಯಾ ಹೆಸರು ಕೇಳಿದ್ದೀರಾ. ಅದೇ ಸೂಳೆಗಾರಿಕೆ ನಡೆಯುವ ಪ್ರದೇಶ?'. 'ಕೇಳಿದ್ದೇನೆ, ನೋಡಿಲ್ಲ'. ತಣ್ಣಗೆ ಹೇಳಿದ್ದೆ. 'ಅದನ್ನೇ ನಾಗ್ಪಾಡ್ ಅಂತ ಕರೆಯೋದು. ಯಲ್ಲೋ ಏರಿಯಾ ಅಂತ್ಲೂ ಕರೀತಾರೆ. ಮುಂಬಯಿಯ ಅರ್ಧದಷ್ಟು ಗಂಡಸರು ತಮ್ಮ ತಂದೆ ತಾಯಿಗಳಿಗೆ, ಹೆಂಡತಿಯರಿಗೆ ಗೊತ್ತಾಗದೆ ಒಮ್ಮೆಯಾದರೂ ನಾಗ್ಪಾಡ್‌ಗೆ ಭೇಟಿ ಕೊಡ್ತಾರೆ. ಅಲ್ಲೇ ಇಪ್ಪತ್ತು ವರ್ಷ ಹೋಟೆಲ್ ನಡೆಸಿದೆ' ಅವನೀಗ ಎದೆ ಮತ್ತು ಹೊಟ್ಟೆಯ ಭಾಗದಲ್ಲಿ ಎರಡೂ ಕೈಗಳಿಂದ ನಿಧಾನವಾಗಿ ನೀವುತ್ತಿದ್ದರೂ ಅವನ ಬೆರಳುಗಳು ಕರುಳನ್ನು ಮುಟ್ಟುತ್ತಿರುವಂತೆ ಅನ್ನಿಸುತ್ತಿತ್ತು.

'ಕರುಳು' ನಾನು ಮೆಲ್ಲಗೆ ಹೇಳಿದ್ದೆ.

'ಭಯಪಡಬೇಡಿ, ನಿಮ್ಮ ಕರುಳಿಗೇನೂ ಡ್ಯಾಮೇಜ್ ಮಾಡುವುದಿಲ್ಲ ನಾನು. ಕರುಳು ದೇಹದಲ್ಲಿನ ಬೇರೆಲ್ಲಾ ಅಂಗಾಂಗಗಳಿಗೆ ಧಾತು ಇದ್ದಂತೆ. ಮನುಷ್ಯ ಎಷ್ಟೇ ಬುದ್ಧಿವಂತನಾದರೂ, ಎಂತೆಂಥ ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳನ್ನು ಮಾಡಿದರೂ ಕರುಳಿನಂಥ ಅತ್ಯಾಧುನಿಕ, ಶ್ರೇಷ್ಠವಾದ ಮತ್ತೊಂದು ಯಂತ್ರವನ್ನು ಯಾವೊತ್ತಿಗೂ ಕಂಡುಹಿಡಿಯಲಾರ'. ಭಗವಾನ್ ಕುಟ್ಟಿ ವೇದಾಂತಿಯಂತೆ ಮಾತನಾಡುತ್ತಿದ್ದ.

'ಭೇಷ್, ಅಪರೂಪದ ಸಂಗತಿಗಳನ್ನು ತಿಳಿದುಕೊಂಡಿದ್ದೀರಿ'. ಪ್ರಶಂಸಿಸಿದ್ದೆ.

'ಎಂಥ ಅಪರೂಪ, ನಾವು ಗಮನ ಇಡಬೇಕಷ್ಟೆ. ಕರುಳು ಏನೆಲ್ಲವನ್ನೂ ಪುಡಿ ಪುಡಿ ಮಾಡಿ ರಕ್ತವನ್ನು ಹೇಗೆ ಉತ್ಪಾದಿಸುತ್ತದೆ ನೋಡಿ. ಈ ರಕ್ತವೇ ವೀರ್ಯವಾಗಿ ಕನ್ವರ್ಟ್ ಆಗಿ ಸೃಷ್ಟಿಗೆ ನೆರವಾಗುವುದು. ಇಂಥ ಮಾಯಾವಿ ಕರುಳನ್ನು ತುಂಬಿಸಿಕೊಳ್ಳಲೆಂದೇ ಮನುಷ್ಯನಿಂದ ಹಿಡಿದು ಎಲ್ಲಾ ಪ್ರಾಣಿಗಳೂ ಪ್ರತಿಕ್ಷಣ ಬಡಿದಾಡುವುದು. ಮುಂಬಯಿಯ ನಾಗ್ಪಾಡ್‌ನಲ್ಲಿ ಕರುಳನ್ನು ತುಂಬಿಸಿಕೊಳ್ಳಲು ವಯಸ್ಸಿನ ಅಂತರವಿಲ್ಲದೆ ಹೆಂಗಸರು ಪ್ರತಿಕ್ಷಣ ದೇಹವನ್ನು ಸರಕಿನಂತೆ ಮಾರಿ ಸಂಪಾದನೆಯಲ್ಲಿ ತೊಡಗುತ್ತಾರೆ. ತಂದೆ ತಾಯಿಗಳು ಮಕ್ಕಳಿಗೆ, ಗಂಡಂದಿರು ಹೆಂಡತಿಯರಿಗೆ ಗಿರಾಕಿಗಳನ್ನು ಹುಡುಕಿ ತರುತ್ತಾರೆ. ಮನುಷ್ಯನಿಗೆ ಅದು ಹೆಣ್ಣಿರಲೀ, ಗಂಡಿರಲಿ ಹಸಿವು ಮತ್ತು ಕಾಮದ ಉತ್ಕಟ ಸಂದರ್ಭದಲ್ಲಿ ಎಂಥಾ ಸಿದ್ಧಾಂತಗಳು, ಪರಿಮಿತಿಗಳು ಅನ್ವಯವಾಗುವುದೇ ಇಲ್ಲ. ಅದಿರಲಿ, ಇಪ್ಪತ್ತು ವರ್ಷಗಳ ಹೋಟೆಲ್ ವ್ಯಾಪಾರದಲ್ಲಿ ಮೂವತ್ತು ಲಕ್ಷದವರೆಗೂ ಸಂಪಾದಿಸಿದ್ದೆ. ನಾನು ಮುಂಬಯಿನ ನಾಗ್ಪಾಡಿನಲ್ಲಿ ಕಳೆದ ಇಪ್ಪತ್ತು ವರ್ಷಗಳು ಇಪ್ಪತ್ತು ದಿನಗಳಂತೆ ಕಳೆದುಹೋಗಿದ್ದವು. ಆದರೆ ಯಾಕೋ ವಾಪಸ್ಸು ಬರುವಾಗ ನಾನು ದುಡಿದಿದ್ದನ್ನೆಲ್ಲಾ ಅಲ್ಲೇ ಹಂಚಿ ಬಂದುಬಿಟ್ಟೆ. ನೀವು ಈ ಸಾರಿ ಮುಂಬಯಿಗೆ ಹೋದರೆ ತಪ್ಪದೆ ನಾಗ್ಪಾಡಿಗೂ ಧಾರಾವಿ ಸ್ಲಂಗೂ ಹೋಗಿ ಒಂದು ರೌಂಡ್ ಹಾಕಿಕೊಂಡು ಬನ್ನಿ...'

ಬಾಡಿ ಮಸಾಜ್ ಮುಗಿದಿತ್ತು . ಅರ್ಧ ಗಂಟೆ ಸಮಯವೆಂಬುದು ಆತನೊಂದಿಗೆ ಮಾತನಾಡುತ್ತಾ, ಮಸಾಜ್ ಆನಂದಿಸುತ್ತಾ ಸೆಕೆಂಡುಗಳಲ್ಲಿ ಕರಗಿಹೋಗಿತ್ತು. ಇಂಡಿಯನ್ ಎಕನಾಮಿಕ್ಸ್‌ನಲ್ಲಿ ಪಿಎಚ್.ಡಿ. ಮಾಡಿದ್ದ ನನಗೇ ಒಂದು ರೀತಿ ನಾಚಿಕೆ ಮತ್ತು ಅವಮಾನವಾದಂತಾಗಿತ್ತು. ನಮ್ಮ ಆರ್ಥಿಕ ಯೋಜನೆಗಳಲ್ಲಿ ಇಂಥ ಬಹುಮುಖ್ಯವಾದ ಸಂಗತಿಗಳನ್ನು ಮರೆತುಬಿಡುತ್ತೇವೆ. ಡೌನ್‌ಟ್ರಾಡನ್ಸ್ ಆರ್ ಆಲ್ವೇಸ್ ನೆಗ್ಲೆಕ್ಟೆಡ್ ಇನ್ ಡೆಮೋಕ್ರೆಸಿ!

'ಕರುಳು ದೊಡ್ಡದು' ಹೇಳಿದ್ದೆ ನಾನು.

'ಕರುಳು ಕೆಟ್ಟದ್ದು ಕೂಡ' ಅವನು ಸೇರಿಸಿದ್ದ. ನಿಜ ಅನ್ನಿಸಿತ್ತು ನನಗೆ. ಕರುಳೇ ಇಲ್ಲದಿದ್ದರೆ ಮನುಷ್ಯನೇ ಏನು, ಇಡೀ ಜೀವಜಗತ್ತಿನ ಎಲ್ಲಾ ಪ್ರಾಣಿಗಳೂ ಶಕ್ತಿಯಿಲ್ಲದ ಯಂತ್ರಗಳಂತೆ ಜಡವಾಗಿ ಬಿದ್ದುಕೊಂಡಿರುತ್ತಿದ್ದವು.

ಭಾಗ–3

ಆತ ನನ್ನನ್ನು ಸ್ಟೀಮ್ ಯಂತ್ರದಲ್ಲಿ ಕೂರಿಸಿ ಸ್ವಿಚ್ ಆನ್ ಮಾಡಿದ್ದ. ಹಬೆಗೆ ದೇಹದಿಂದ ನೀರಿನ ರೂಪದಲ್ಲಿ ಕೊಳೆ ಬಿಟ್ಟುಕೊಂಡಂತೆ ಅನುಭವವಾಗುತ್ತಿತ್ತು. 'ನಮ್ಮ ಮಾಧವನ್ ಪಿಳ್ಳೈಗೆ ದಿನ ಬಿಟ್ಟು ದಿನ ಮಸಾಜ್ ಮಾಡ್ತೀನಿ. ಆದ್ದರಿಂದಲೇ ಅಷ್ಟು ಗಟ್ಟಿಯಾಗಿರೋದು', ಕೈಗಳನ್ನು ಶಾಂಪು ಮತ್ತು ಬಿಸಿನೀರಿನಿಂದ ತೊಳೆದುಕೊಳ್ಳುತ್ತಾ ಹೇಳಿದ್ದ ಭಗವಾನ್ ಕುಟ್ಟಿ.

'ನಿಸ್ವಾರ್ಥಿ ನೀವು' ಹೇಳಿದ್ದೆ ನಾನು.

'ನಿಮಗೆ ಸ್ಟೀವ್ ಜಾಬ್ಸ್ ಬಗ್ಗೆ ಗೊತ್ತಾ?' ಕೇಳಿದ್ದ ಭಗವಾನ್ ಕುಟ್ಟಿ. ಆತನ ಬಾಯಲ್ಲಿ ಸ್ಟೀವ್ ಜಾಬ್ಸ್ ಹೆಸರು ಕೇಳಿ ಅಚ್ಚರಿಯಾಗಿತ್ತು.

'ಜಗತ್ತಿನ ಎಲ್ಲಾ ವ್ಯಾಪಾರಿಗಳಿಗೂ ಕೈಗಾರಿಕೋದ್ಯಮಿಗಳಿಗೂ ಸ್ಟೀವ್ ಜಾಬ್ಸ್ ಹೆಸರು ಗೊತ್ತಿರಲೇಬೇಕು. ಆಪಲ್ ಕಂಪನಿಯ ಸಂಸ್ಥಾಪಕ. ಜಗತ್ತಿನ ಕೆಲವೇ ಕೆಲವು ಅತ್ಯಂತ ದೊಡ್ಡ ಶ್ರೀಮಂತರಲ್ಲಿ ಒಬ್ಬನಾಗಿದ್ದವನು. ಜಗತ್ತಿನ ಅತ್ಯಂತ ದೊಡ್ಡ ದಾನಿ ಕೂಡ. ಕೇವಲ ಅರವತ್ತು ವರ್ಷಕ್ಕೆ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್‌ನಿಂದಾಗಿ ಸತ್ತುಹೋದ. ಸಾವು ಯಾರನ್ನೂ ಬಿಡುವುದಿಲ್ಲ...' ಹೇಳಿದ್ದೆ ನಾನು.

'ಅದೆಲ್ಲ ಮುಖ್ಯವಲ್ಲ. ಸ್ಟೀವ್ ಜಾಬ್ಸ್‌ನ ಕೊನೆಯ ದಿನಗಳಲ್ಲಿ ಅವನ ಕೊಠಡಿಯಲ್ಲಿದ್ದದ್ದು ಒಂದು ಸರಳವಾದ ಮಂಚ ಮತ್ತು ಮಹಾತ್ಮ ಗಾಂಧಿಯವರ ಭಾವಚಿತ್ರವಂತೆ. ಇದನ್ನು ನನಗೆ ಮಾಧವನ್ ಪಿಳ್ಳೈ ಹೇಳಿದ್ದು. ಮಾಧವನ್ ಪಿಳ್ಳೈ ಹೆಂಡತಿಗೆ ಕ್ಯಾನ್ಸರ್ ಇತ್ತು. ಒಳ್ಳೆಯ ಟ್ರೀಟ್‌ಮೆಂಟ್ ಕೊಡಿಸುತ್ತಿದ್ದರು. ಆದರೆ ಮಗನ ಸಾವಿನ ಸುದ್ದಿ ಕೇಳಿ ಸಿವಿಯರ್ ಹಾರ್ಟ್ ಅಟ್ಯಾಕ್ ಆಗಿ ಹೋಗಿಬಿಟ್ಟರು. ಅಂದಹಾಗೆ, ಮಾಧವನ್ ಪಿಳ್ಳೈರ ಹೆಂಡತಿ ನನ್ನ ಸ್ವಂತ ತಂಗಿ. ಸ್ವಾರ್ಥ, ಪ್ರೀತಿ, ಮೋಹ ಇವು ಕೂಡ ಒಂಥರ ಕ್ಯಾನ್ಸರ್ ಇದ್ದಂತೇ ಸರಿ. ಮಾಧವನ್ ಪಿಳ್ಳೈ ತಮ್ಮ ಆಫೀಸಿನಲ್ಲಿ ಮತ್ತು ರೂಮಿನಲ್ಲಿ ಗಾಂಧಿಯವರ ಭಾವಚಿತ್ರಗಳನ್ನು ಹಾಕಿಕೊಂಡಿದ್ದಾನೆ. ಆದರೆ ಮನುಷ್ಯ ಮನುಷ್ಯ ಮಾತ್ರನೇ ಅಲ್ಲವೇ. ಕೆ.ಎಮ್. ನಯ್ಯಾರ್ ಜೊತೆ ಸೇರ್ಕೊಂಡು ಏನೇನೋ ಮಾಡ್ದ ಮತ್ತು ಈಗಲೂ ಮಾಡ್ತಾ ಇದಾನೆ ಸಂಪಾದನೆಗೆ. ಹಣದ ಆಸೆ ಕೂಡಾ ಒಂಥರಾ ಕ್ಯಾನ್ಸರ್ ಇದ್ದಂಗೆ. ಸಾವಿನೊಂದಿಗೆ ಮಾತ್ರವೇ ಮನುಷ್ಯನ ಹಣದ ಆಸೆ ಇಂಗಿಹೋಗೋದು' ಭಗವಾನ್ ಕುಟ್ಟಿಯ ಮಾತುಗಳಲ್ಲಿ ಭಾವುಕತೆ ಹೊಸೆದುಕೊಂಡಿತ್ತು.

ಸ್ಟೀಮ್ ಬಾಕ್ಸ್‌ನಿಂದ ಹೊರಬಂದು ಶವರ್ ಬಾತ್ ಮುಗಿಸಿದಾಗ ದೇಹ ಹಗುರವಾಗಿ ಉಲ್ಲಾಸ ತುಂಬಿಕೊಂಡಿತ್ತು. ಜೇಬಿನಿಂದ ಐನೂರರ ಎರಡು ನೋಟು ತೆಗೆದು ಭಗವಾನ್ ಕುಟ್ಟಿಗೆ ಕೊಡಲು ಹೋದೆ.

'ಅರೆರೆ ಕ್ರಾಂತಿ ಭಯ್ಯಾ ಎಂಥ ಮನುಷ್ಯರಾದಿರಿ ನೀವು. ಇದು ನನ್ನ ಆತಿಥ್ಯದ ಖುಷಿಯ ಕೆಲಸ. ದುಡ್ಡು ದುಡಿಯಲೆಂದೇ ಕೇರಳದಲ್ಲಿ ಸಾವಿರಾರು ಮಸಾಜ್ ಪಾರ್ಲರುಗಳಿವೆ. ಕೆಲವರು ಮಸಾಜ್ ಪಾರ್ಲರ್‌ಗಳಲ್ಲಿ ಹೆಣ್ಣು ಮಕ್ಕಳನ್ನು ಇಟ್ಟುಕೊಂಡು ಸೆಕ್ಸ್ ಬಿಸಿನೆಸ್ ಕೂಡಾ ನಡೆಸುತ್ತಿದ್ದಾರೆ. ಇಷ್ಟಕ್ಕೂ ನನಗೆ ಹಣದ ಚಿಂತೆಯೂ ಇಲ್ಲ, ಮೋಹವೂ ಇಲ್ಲ. ನನ್ನ ಅಕೌಂಟ್‌ನಲ್ಲಿ ಹತ್ತು ಲಕ್ಷದ ಮೇಲೆ ಬಿದ್ದಿದೆ. ಕೊಟ್ಟಾಯಂನಲ್ಲಿ ಎರಡು, ಚಂಗನ್ನೆರಿಯಲ್ಲಿ ಎರಡು ಎಸಿ ಟ್ರಾವೆಲ್ಲರ್ಸ್ ಟೆಂಪೊ ಬಿಟ್ಟಿದ್ದೀನಿ. ನನ್ನ ತಮ್ಮನ ಮಗ ನೋಡ್ಕೊತಿದಾನೆ. ಶಬರಿಮಲೆ ಸೀಸನ್‌ನಲ್ಲಿ ಒಳ್ಳೆ ಲಾಭ ಸಿಗುತ್ತದೆ. ವರ್ಷಕ್ಕೆ ಎಲ್ಲಾ ಖರ್ಚು ಕಳೆದು ಮೂರ್ನಾಲ್ಕು ಲಕ್ಷಗಳಾದರೂ ನನ್ನ ಅಕೌಂಟಿಗೆ ಬೀಳುತ್ತದೆ. ಶಬರಿಮಲೆ ಟೆಂಪಲ್‌ನಲ್ಲಿ ಐದಾರು ಜನ ನಂಬೂದ್ರಿಗಳು ನನ್ನ ಕ್ಲೋಸ್ ಫ್ರೆಂಡ್ಸ್ ಇದಾರೆ. ಫೋನ್ ಮಾಡಿದರೆ ಒಳ್ಳೆಯ ದರ್ಶನಕ್ಕೆ ವ್ಯವಸ್ಥೆ ಮಾಡ್ತಾರೆ. ಮೊದಲೆಲ್ಲಾ ಅದರಲ್ಲೂ ದುಡ್ಡು ಸಂಪಾದನೆ ಮಾಡ್ತಿದ್ದೆ. ಅದೆಲ್ಲಾ ಒಳ್ಳೆಯದಲ್ಲ ಅಂತ ಬಿಟ್ಟುಬಿಟ್ಟಿದ್ದೀನಿ ಈಗ. ಸದ್ಯ ಟೆಂಪಲ್ ಬಾಗಿಲು ಮುಚ್ಚಿದೆ. ನೀವು ಹೋಗಬೇಕೆನಿಸಿದಾಗ ನನಗೆ ಫೋನ್ ಮಾಡಿದರೆ ಸಾಕು, ಅರೇಂಜ್ ಮಾಡ್ತೀನಿ. ನಾನೂ ಅನೇಕ ಸಾರಿ ಶಬರಿಮಲೆ ಹತ್ತಿದ್ದೀನಿ. ಮೂವತ್ತು ವರ್ಷಗಳ ಹಿಂದೆ ಬರಿ ಕಾಡಿನ ಕಾಲುದಾರಿ ಮಾತ್ರ ಇತ್ತು. ಹತ್ತೋಕೆ ತುಂಬಾ ಕಷ್ಟ ಇತ್ತು. ಈಗ ಬಿಡಿ,